ಕಾರ್ಮಿಕರ ರಕ್ಷಣೆ ಬಗ್ಗೆ

೪೧೯. ಶ್ರೀ ಕರಿಯಣ್ಣ. (ಹೊಳಿಹೊನ್ನೂರು) —ಮಾನ್ಯ ಸಮಾಜ ಕಲ್ಯಾಣ ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಬಹುತೇಕ ಎಲ್ಲಾ ಮಧ್ಯಮ ದರ್ಜೆಯ ಹೋಟೆಲ್‌ಗಳಲ್ಲಿ ೬ ವರ್ಷದಿಂದ ೧೨ ವರ್ಷದೊಳಗಿನ ಮಕ್ಕಳು ಕೆಲಸ ಮಾಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಕಾನೂನಿನ್ವಯ ಬಾಲ ಕಾರ್ಮಿಕರಿಗೆ ರಕ್ಷಣೆ ನೀಡದಿರಲು ಕಾರಣವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಕಾರ್ಮಿಕ. ರೇಷ್ಮೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಸಂಪೂರ್ಣವಾಗಿ ನಿಜವಲ್ಲ. ಕಾರ್ಮಿಕ ಕಾನೂನುಗಳ ಅಡಿಯಲ್ಲಿ ೧೨ ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಸಂಪೂರ್ಣವಾಗಿ ನಿಷಿದ್ಧ

ಆ) ಉಪ ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹರಿಜನ ಗಿರಿಜನರೆಂದು ಸುಳ್ಳು ದಾಖಲೆಗಳನ್ನು ನೀಡಿರುವ ಬಗ್ಗೆ

೪೧೭. ಶ್ರೀ ಕರಿಯಣ್ಣ, (ಹೊಳೆ ಹೊನ್ನೂರು).—ಮಾನ್ಯ ಸಮಾಜ ಕಲ್ಯಾಣ ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೮ ರಿಂದ ೧೯೯೦ರ ಫೆಬ್ರವರಿವರೆಗೆ ರಾಜ್ಯದಲ್ಲಿ ಹರಿಜನ ಗಿರಿಜನರೆಂದು ಸುಳ್ಳು ಅರ್ಹತಪತ್ರಗಳ ದಾಖಲೆಗಳನ್ನು ನೀಡಿ ಸರ್ಕಾರಿ ಕೆಲಸ ಪಡೆದಿರುವವರ ಸಂಖ್ಯೆ ಎಷ್ಟು?

ಆ) ಇವರ ವಿರುದ್ಧ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶಿವಣ್ಣ, (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ. ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ೮೯.

ಆ) (೧) ೩೯ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ.

(೨) ೧೭ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯ ತಡೆ ಆಜ್ಞೆ ಇತ್ತಿದೆ.

(೩) ೩೫ ಪ್ರಕರಣಗಳನ್ನು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೬೩ ಎಸ್‌ಎಡಿ ೮೯ ದಿನಾಂಕ ೨೩-೧-೯೬ರ ಸೂಚನೆಗಳ ಅನ್ವಯ ತಡೆಹಿಡಿಯಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರ ವರ್ಗದವರು ಹರಿಜನ ಗಿರಿಜನರಿಗೆ ಪ್ರಮಾಣ ಪತ್ರ ನೀಡುವ ಬಗ್ಗೆ.

೪೧೬ ಶ್ರೀ ಕರಿಯಣ್ಣ (ಹೊಳೆ ಹೊನ್ನೂರ್).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ,ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮಾಜ ಕಲ್ಯಾಣ ಇಲಾಖೆಯ ಅಧಿಕಾರ ವರ್ಗದವರಿಗೆ ಹರಿಜನ ಗಿರಿಜನರಿಗೆ ಜಾತಿ ಪ್ರಮಾಣ ಪತ್ರ ನೀಡುವ ಅಧಿಕಾರ ಇದೆಯೇ ?

ಶ್ರೀ ಬಿ. ಶಿವಣ್ಣ(ಸಮಾಜ ಕಲ್ಯಾಣ, ಕಾರ್ಮಿಕ. ರೇಷ್ಮೆ. ಗಣಿ ಮತ್ತು ಭೂ ವಿಜ್ಞಾನ ಸಚಿವರು.)—

ಅ) ಇಲ್ಲ.